ಎಂ.ಕೆ. ಮಂಜುನಾಥ್

ಕಲೆ: ಗಣೇಶ ಆಚಾರ್ಯ

# ರೈತನ ಸವಾಲು



ಹಳ್ಳಿಯೊಂದರ ಐದಾರು ಜನ ಹಿರಿಯರು ಪ್ರತಿದಿನ ತಮ್ಮ ಕೆಲಸ ಕಾರ್ಯಗಳೆಲ್ಲ ಮುಗಿದ ಮೇಲೆ ಸಂಜೆ ಹೊತ್ತು ಒಂದೆಡೆ ಸೇರಿ ಹರಟೆ ಹೊಡೆಯುತ್ತಿದ್ದರು. ಒಮ್ಮೆ ಒಬ್ಬ ಸಾಹುಕಾರ ಅವರ ಬಳಿ ಬಂದು, 'ನಾನು ಈ ಹಳ್ಳಿಯ ಜಮೀನುದಾರನಿಗೆ ಬಹಳ ಬೇಕಾದವನು. ಅವರ ಆಪ್ತಮಿತ್ರನಿದ್ದ ಹಾಗೆ. ನಾನು ಅವರ ಜೊತೆಯಲ್ಲಿ ಕುಳಿತು ಊಟ ಮಾಡುತ್ತೇನೆ, ನಿಮಗೆ ಗೊತ್ತಾ?' ಎಂದು ಹೇಳಿಕೊಂಡ. ಆಗ ಆ ಗುಂಪಿನಲ್ಲಿನ ಹಿರಿಯ ರೈತನೊಬ್ಬ ಎದ್ದು ಆ ಸಾಹುಕಾರನಿಗೆ, 'ಸ್ವಾಮಿ, ಇದೇನು ಮಹಾ? ಬೇಕಿದ್ದರೆ ನಾನೂ ಕೂಡಾ ಅವರೊಟ್ಟಿಗೆ ಕುಳಿತು ಊಟ ಮಾಡಬಲ್ಲೆ' ಎಂದ. ಇದರಿಂದ ಸಿಟ್ಟಿಗೆದ್ದ ಸಾಹುಕಾರ, 'ಏನಯ್ಯಾ? ನೀನೊಬ್ಬ ಸಾಮಾನ್ಯ ರೈತ. ನನ್ನ ಪರಮ ಮಿತ್ರನಾದ ಜಮೀನುದಾರನ ಜೊತೆ ನೀನು ಊಟ ಮಾಡುವುದೆಂದರೇನು? ಇದು ನಿನಗೆ ಸಾಧ್ಯವಾ? ನಿನಗೆಲ್ಲೋ ಭ್ರಾಂತು' ಎಂದ. ಅದಕ್ಕೆ ಆ ಹಿರಿಯ ಅಳುಕದೆ, 'ಹೌದು ಸ್ವಾಮಿ, ನಾಳೆ ನಾನು ಜಮೀನುದಾರರ ಜೊತೆ ಕುಳಿತುಕೊಂಡು ಊಟ ಮಾಡಿ ಬರುವೆ. ಬೇಕಾದರೆ ನೀವೇ ನೋಡಿ. ಒಂದು ವೇಳೆ ಇದಕ್ಕೆ ನಾನೇನಾದರೂ ತಪ್ಪಿದರೆ ಸೋತೆನೆಂದು ಒಪ್ಪಿಕೊಂಡು ನಿಮ್ಮ ಮನೆಯಲ್ಲಿ ಜೀತದಾಳಾಗಿ ಸಂಬಳವಿಲ್ಲದೆ ದುಡಿಯುವೆ' ಎಂದು ಸವಾಲು ಹಾಕಿದ. ಸಾಹುಕಾರ, 'ಆಯಿತು! ಒಂದು ವೇಳೆ ನೀನು ಗೆದ್ದರೆ ನಾನು ನಿನಗೆ ಮೂರು ಎತ್ತುಗಳನ್ನು ನೀಡುವೆ' ಎಂದ.

ಮಾರನೆಯ ದಿನ ಆ ಹಿರಿಯ ರೈತ ಜಮೀನುದಾರನ ಮನೆಗೆ ಹೋದ. ಜಮೀನುದಾರ, 'ಏನು ಬಂದದ್ದು?' ಎಂದು ಕೇಳಿದಾಗ ರೈತ, 'ಏನಿಲ್ಲ! ಕಿರೀಟವೊಂದಕ್ಕೆ ಚಿನ್ನದ ಗರಿ ಹಾಕಿಸಲು ಎಷ್ಟು ಖರ್ಚಾಗುತ್ತದೆ ಹೇಳಬಲ್ಲಿರಾ?' ಎಂದು ಕೇಳಿದ. ಚಿನ್ನದ ಗರಿ ಎಂಬ ಶಬ್ದ ಕೇಳಿದ ಕೂಡಲೇ ಜಮೀನುದಾರನ ಮನಸ್ಸಿನಲ್ಲಿ ದುರಾಸೆ ಮೂಡಿತು. 'ಆಯಿತು ಆಯಿತು! ನೀನು ತುಂಬಾ ದೂರದಿಂದ ನಡೆದುಕೊಂಡು ದಣಿದು ಬಂದಿದ್ದೀಯ. ಮೊದಲು ಊಟ ಮಾಡೋಣ ಬಾ'